

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಾಹಿತ್ಯಸಮ್ಮೇಳನ 'ಕನ್ನಡದ ಜಾತ್ರೆ'ಯಾಗಲಿ, ಸಂತೆಯಾಗದಿರಲಿ!

**ಬೆ**ಂಗಳೂರಿನ ನಮ್ಮ ತರಳಬಾಳು ಕೇಂದ್ರದಿಂದ ಹೊರಟು ಸಿರಿಗೆರೆಗೆ ಪ್ರಯಾಣಿಸುತ್ತಿರುವಾಗ ಯಶವಂತಪುರದ ವೃತ್ತವೊಂದರ ಬಳಿ ವಾಹನ ಸಂಚಾರದ ಒತ್ತಡದಿಂದಾಗಿ ನಮ್ಮ ಕಾರು ಕೆಲ ಹೊತ್ತು ನಿಲ್ಲಬೇಕಾಯಿತು. ಎದುರಿಗೆ ದಪ್ಪ ಅಕ್ಷರಗಳಲ್ಲಿ ಬಣ್ಣ ಬಣ್ಣದಲ್ಲಿ ಬರೆದ ಒಂದು ಬೋರ್ಡು ನಮ್ಮ ಕಣ್ಸೆಳೆಯಿತು. ಸಂಚಾರೀ ಪೋಲೀಸರು ರಸ್ತೆ ಸುರಕ್ಷತೆಗಾಗಿ ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಸುವವರಿಗೆ ನೀಡಿದ ಸೂಚನಾಫಲಕ ಅದಾಗಿತ್ತು. ಮೋಟಾರ್‌ಸೈಕಲ್ ಸವಾರರು ತಲೆಗೆ ಹೆಲ್ಮೆಟ್ ಧರಿಸುವ ಅಗತ್ಯವನ್ನು ಕುರಿತು ನೀಡಿದ ಎಚ್ಚರಿಕೆಯ ಮಾತುಗಳನ್ನು ಅದರಲ್ಲಿ ಹೀಗೆ ಬರೆಯಲಾಗಿತ್ತು: "ನಿಮ**ಗೀರು**ವುದು ಒಂದೇ ತಲೆ, ಅದನ್ನು ರ**ಕ್ಷೀ**ಸಿ". ಕರ್ನಾಟಕದ ರಾಜಧಾನಿಯಲ್ಲಿ ಕನ್ನಡವು 'ಗೀರಿ'ಸಿಕೊಳ್ಳುತ್ತಿರುವ ಇಂಥ ದುಃಸ್ಥಿತಿಯನ್ನು ಕಂಡು ನಮಗೆ ತುಂಬಾ ವ್ಯಥೆಯಾಯಿತು. ಶ್ರೀಮತಿ ಬಿ.ಟಿ. ಲಲಿತಾನಾಯಕ್‌ರವರು ಬೆಂಗಳೂರಿನ ನಮ್ಮ ತರಳಬಾಳು ಕೇಂದ್ರದಲ್ಲಿ ನಡೆದ ಬೆಳುದಿಂಗಳ ಕವಿಗೋಷ್ಠಿ 'ಕಾವ್ಯಪೂರ್ಣಿಮಾ' ದಲ್ಲಿ ವಾಚಿಸಿದ **'ಕೊರಗಬೇಡ ಖನ್ನಡಮ್ಮ'** ಎಂಬ ಕೆಳಗಿನ ಕವಿತೆ ನೆನಪಾಯಿತು:

> **"ಆಚೆಮನೆ ಮಲೆಯಾಳಿಯಮ್ಮ
> ಈಚೆಮನೆ ತಮಿಳರಮ್ಮ
> ಉತ್ತರದ ಹಿಂದಿಯಮ್ಮ
> ಗುಜರಾತಿನ ಮಾರ್ವಾಡಿಯಮ್ಮ
> ಎಲ್ಲ ಸೇರಿ ಕೂಡಿದೊಡನೆ...**
>
> **ಕನ್ನಡಮ್ಮನ ಸ್ಥಿತಿಯ ಕಂಡು
> 'ವೆರಿ ಸೀರಿಯಸ್ಸು' ಎಂದು
> ಎಮರ್ಜನ್ಸಿ ವಾರ್ಡಿನಲ್ಲಿ ಹಾಕಿಬಿಟ್ಟರು"**

ಕನ್ನಡಮ್ಮನನ್ನು ಸೇರಿಸಿದ ಈ 'ಎಮರ್ಜನ್ಸಿ ವಾರ್ಡ್' ಸರ್ಕಾರಿ ಆಸ್ಪತ್ರೆಯಾಗಿರಬೇಕೇ ಹೊರತು ಖಂಡಿತಾ ಖಾಸಗಿ ನರ್ಸಿಂಗ್ ಹೋಂ ಆಗಿರಲು ಸಾಧ್ಯವಿಲ್ಲ ಎನಿಸಿತು. ವಾರ್ಡಿನಲ್ಲಿರುವ ಕನ್ನಡಮ್ಮನ ಆರೋಗ್ಯವನ್ನು ವಿಚಾರಿಸಲು ನಮ್ಮ ನಾಯಕರಿಗೆ ಅಥವಾ 'ಖನ್ನಡದ ಉಟ್ಟು ಓರಾಟ'ಗಾರರಿಗೆ ನವಂಬರ್ ತಿಂಗಳು ಬರಬೇಕು; ಇಲ್ಲವೇ ಕನ್ನಡ ಸಾಹಿತ್ಯ ಸಮ್ಮೇಳನ ಬರಬೇಕು ಎಂದುಕೊಳ್ಳುತ್ತಾ ಅಂದಿನ ದಿನಪತ್ರಿಕೆಗಳ ಮೇಲೆ ಕಣ್ಣುಹಾಯಿಸಿದೆವು. ಅದೇ ದಿನ ಕನ್ನಡಮ್ಮನ 'ಸುದೈವ'ಕ್ಕೆ ಕಡಲ ತೀರದ ಮಂಗಳೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿತ್ತು. ಆ ಸಮ್ಮೇಳನದ ಆರಂಭದ ದಿನ ಕಾಸರಗೋಡು ಗಡಿನಾಡಿನ ಕನ್ನಡಾಭಿಮಾನದ ಕಟ್ಟಾಳುಗಳೂ ನಾಡಿನ ಹಿರಿಯ ಕವಿಗಳೂ ಆದ ಕಯ್ಯಾರ ಕಿಞ್ಞಣ್ಣರೈ ಅವರು ಮಾಡಿದ ಅಧ್ಯಕ್ಷ ಭಾಷಣ ವರದಿಯಾಗಿತ್ತು. "ಸಾಹಿತ್ಯ ಸಮ್ಮೇಳನ ಜಾತ್ರೆಯಲ್ಲ; ಅದೊಂದು ತೀರ್ಥಯಾತ್ರೆ" ಎಂದು ಅವರು ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದರು. ಅತ್ಯಂತ ಕಾವ್ಯಮಯವಾಗಿ ಹೇಳಿದ ಅವರ ಈ ಮಾತು ನಮ್ಮನ್ನು ಆಲೋಚನಾಪರರನ್ನಾಗಿಸಿತು. ಮೇಲು ನೋಟಕ್ಕೆ ಈ ಮಾತು ಚೆನ್ನಾಗಿಯೇ ಕಾಣುತ್ತದೆ. ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದರಿಂದ ಪ್ರಯೋಜನವಿಲ್ಲ, ಅವು ಜಾತ್ರೆಗಳಂತೆ ಆಗಿವೆ ಎಂಬ ಟೀಕೆಗೆ ಕಯ್ಯಾರ ಕಿಞ್ಞಣ್ಣರೈ ಅವರು ಈ ರೀತಿ ಪ್ರತಿಕ್ರಿಯಿಸಿದ್ದರು. ಆದರೆ ಜಾತ್ರೆಗೂ ತೀರ್ಥಯಾತ್ರೆಗೂ ವಾಸ್ತವವಾಗಿ ಯಾವ ವ್ಯತ್ಯಾಸವೂ ಇಲ್ಲ.

ನಮ್ಮ ಸಾಂಸ್ಕೃತಿಕ ಕೇಂದ್ರಗಳಾದ ಜಾತ್ರೆಗಳನ್ನು ಕುರಿತು ಜನರ ಆಡುಮಾತಿನಲ್ಲಿ ಕೀಳು ಭಾವನೆ ಏಕಿದೆಯೋ ನಮಗೆ ಅರ್ಥವಾಗುತ್ತಿಲ್ಲ. ನಮ್ಮ ಹಳ್ಳಿಗಾಡಿನ ಜಾತ್ರೆಗಳನ್ನು ಗಮನಿಸಿ. ಜನರು ಭಕ್ತಿ ಭಾವದಿಂದ ಜಾತ್ರೆಗಳಿಗೆ ಹೋಗುತ್ತಾರೆ. ಜಾತ್ರೆ ನಡೆಯುವ ಸ್ಥಳದಲ್ಲಿ ಇರುವ ದೇವರ ದರ್ಶನ ಪಡೆಯಲು, ಭಕ್ತಿಯನ್ನು

ಸಮರ್ಪಿಸಲು, ವಿವಿಧ ರೀತಿಯ ಹರಕೆಗಳನ್ನು ಸಲ್ಲಿಸಲು ತುದಿಗಾಲ ಮೇಲೆ ನಿಂತಿರುತ್ತಾರೆ. ಅಲ್ಲಿನ ರಥವನ್ನು ಎಳೆಯಲು, ಮಿಣಿಗೆ ಕೈಹಚ್ಚಲು ನಾ ಮುಂದು ತಾ ಮುಂದು ಎಂದು ಉತ್ಸಾಹದಿಂದ ಪೈಪೋಟಿ ನಡೆಸುತ್ತಾರೆ. ದೇವರು ರಥವೇರಿ ಕುಳಿತಿದ್ದರೆ ಮಕ್ಕಳು ಮೊಮ್ಮಕ್ಕಳು ಅಜ್ಜಂದಿರ ಹೆಗಲೇರಿ ಕುಳಿತಿರುತ್ತಾರೆ. ಅಂಗಡಿಗಳಲ್ಲಿ ಮಕ್ಕಳಿಗೆ ಬೆಂಡು ಬತ್ತಾಸು ತಿನ್ನಲು ಕೊಡಿಸುತ್ತಾರೆ. ಅಂಗರಾಗಗಳನ್ನು ಶೃಂಗಾರ ಪ್ರಸಾಧನಗಳನ್ನು ಕೊಳ್ಳುತ್ತಾರೆ ಎಂಬುದು ನಿಜವಾದರೂ ಅದು ಕೇವಲ ಆನುಷಂಗಿಕ. ದೇವರಿಗೆ ತಮ್ಮ ಭಕ್ತಿ ಸಮರ್ಪಣೆಯೇ ಅವರ ಪ್ರಮುಖ ಗುರಿಯಾಗಿರುತ್ತದೆ. ಒಂದು ವೇಳೆ ದೇವಸ್ಥಾನವಿಲ್ಲದ ಸ್ಥಳದಲ್ಲಿ ಜಾತ್ರೆಗಳಲ್ಲಿಡುವಂತೆ ಬೆಂಡು ಬತ್ತಾಸುಗಳ, ಅಂಗರಾಗಗಳ ಶೃಂಗಾರ ಪ್ರಸಾಧನಗಳ ಅಂಗಡಿಗಳನ್ನು ಇಟ್ಟರೆ ಅದನ್ನು ಜಾತ್ರೆ ಎನ್ನುವುದಿಲ್ಲ. ಸಂತೆ ಎನ್ನುತ್ತಾರೆ. ಜಾತ್ರೆಗೆ ಹೋಗುವ ಭಕ್ತರ ಮನೋಧರ್ಮಕ್ಕೂ ಸಂತೆಗೆ ಹೋಗುವ ಜನರ ಮನೋಧರ್ಮಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಸಂತೆಯೆನಿಸಿಕೊಂಡ ಜಾಗ ಜನರು ತಮಗೆ ಬೇಕಾದ ವಸ್ತುವನ್ನು 'ಕೊಳ್ಳುವ/ಮಾರುವ ಆರ್ಥಿಕ ಚಟುವಟಿಕೆ'ಯ ತಾಣ ಆಗಬಹುದೇ ಹೊರತು ಭಕ್ತಿ ಭಾವಗಳಿಗೆ ಅವಕಾಶ ಇರುವುದಿಲ್ಲ.

ಸಾಹಿತ್ಯ ಸಮ್ಮೇಳನಗಳು ಜಾತ್ರೆಗಳಂತೆ ನಡೆಯಬೇಕು. ಸಂತೆಯಂತಾಗಬಾರದು. ಜಾತ್ರೆಯಲ್ಲಿ ದೇವರ ಬಗೆಗೆ ಜನರಿಗೆ ಭಕ್ತಿ ಉತ್ಸಾಹಗಳಿರುವಂತೆ ಸಮ್ಮೇಳನಗಳಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಕನ್ನಡ ನಾಡು ನುಡಿ ಸಂಸ್ಕೃತಿಗಳ ಬಗೆಗೆ ಭಕ್ತಿ ಉತ್ಸಾಹಗಳಿರಬೇಕು. ಅಲ್ಲಿ ದೇವರ ತೇರು ಹರಿಯುವಂತೆ ಇಲ್ಲಿ ಕನ್ನಡದ ತೇರು ಹರಿಯಬೇಕು. ಅನೇಕ ಕವಿಗಳು ಕನ್ನಡ ಭಾಷೆ ಸಂಸ್ಕೃತಿಗಳ ಕೆಲಸವನ್ನು ತೇರನ್ನೆಳೆಯುವ ಕ್ರಿಯೆಯೊಂದಿಗೆ ಸಮನ್ವಯಗೊಳಿಸಿದ್ದಾರೆ. ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪನವರ ಈ ಕವಿತೆಯನ್ನೇ ನೋಡಿ:

**ತೇರನೆಳೆವವರು ನಾವು – ಎಲ್ಲಿದ್ದರೇನು?**
**ಬೊಂಬಾಯಿ, ಮದರಾಸು, ಕಲ್ಕತ್ತ, ಡೆಲ್ಲಿ**
**ಎಲ್ಲೆಂದರಲ್ಲಿ,**

**ಕನ್ನಡದ ಉಸಿರಾಡುವೆದೆಗಳಿರುವಲ್ಲಿ**
**ಕನ್ನಡದ ಸತ್ವಗಳ ಬೀಜಗಳ ಚೆಲ್ಲಿ**
**ತೇರ ಮಿಣಿ ಹರಿದಿರಲು**
**ಹಿಡಿದುಕೊಳ್ಳಿರೊ ಅದನು,**
**ಎಲ್ಲಿದ್ದರೇನು?**

**ಕೋಟಿ ಕೈಗಳ ಕೂಟ, ಕೋಟಿ ಕಣ್ಗಳ ನೋಟ**
**ಕೋಟಿ ಹೃದಯದ ಮಿಲನದಾಟದಲ್ಲಿ,**
**ಎದೆ ಎದೆಯ ಬಿಂದಿಗೆಯ ತುಂಬ ತುಂಬಿರುವಂಥ**
**ಉತ್ಸಾಹದಭಿಷೇಕವಾರಿಯಲ್ಲಿ**
**ಮುಂದೆ ಬನ್ನಿರೊ ಬನ್ನಿ**
**ಕವಿಮನೋರಥಗಳ ಬಾಳ ಬೀದಿಯ ಮೇಲೆ**
**ಎಳೆಯಬನ್ನಿ**

**ಕನ್ನಡದ ತಾಯ ಮುಖಬಿಂಬ ನಿಮ್ಮೆದೆಯಲ್ಲಿ ಬಿಂಬಿಸಿರೆ**
**ನಂಬುಗೆಯ ತುಂಬುಗೈ ನೀಡಬನ್ನಿ**
**"ಭುವನೇಶ್ವರೀದೇವಿ ರಥವನೇರಿಹಳು**
**ಜಯ ರಾಜೇಶ್ವರೀ ಕನ್ನಡಿಗರೊಡತಿ!"**

**ಓ ಎಳೆಯಿರೋ ಕನ್ನಡದ ತೇರ**
**ನೀವು ನಿಂತಿರುವ ನೆಲೆಗಳಿಂದ**
**ನಾವೆಲ್ಲರು ಒಂದು ತೇರೆಳೆವ ಜನರು**
**ಆ ಊರೊ, ಈ ಊರೊ, ಹಿಂದೆಯೋ ಮುಂದೆಯೋ**
**ಎಲ್ಲಿಯೋ ಒಂದು ಕಡೆ ಕೈಹಾಕಿದವರು**

ಕನ್ನಡದ ತೇರಿನ ವಿಶ್ವರೂಪದರ್ಶನ ಇಲ್ಲಿದೆ! ಇದೊಂದು ಸಾರ್ಥಕವಾದ ಅಪರೂಪದ ಉಪಮೆ.

ಆದರೆ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಅನೇಕರಲ್ಲಿ ಇಂಥ ತೇರೆಳೆವ ಭಾವನೆ, ತನ್ಮಯತೆ, ಭಕ್ತಿ, ಶ್ರದ್ಧೆಗಳಿರುವುದು ಮಾತ್ರ ಪ್ರಶ್ನಾರ್ಹ. ಸಮ್ಮೇಳನ ಆರಂಭಗೊಳ್ಳುವ ದಿನವೇ ಪತ್ರಿಕೆಗಳಲ್ಲಿ ದಪ್ಪ ಅಕ್ಷರಗಳಲ್ಲಿ ಮೂಡಿ ಬರುವ ವಿಷಯಗಳೆಂದರೆ: ವಸತಿಯ ಅವ್ಯವಸ್ಥೆ, ಊಟತಿಂಡಿಗಳಿಗೆ ಪರದಾಟ, ವೇದಿಕೆಯ ಮೇಲಿನ ತಿಕ್ಕಾಟ, ಗದ್ದಲ! ನಾಡು-ನುಡಿಗಳನ್ನು ಕುರಿತ ಚಿಂತನೆಯ ಮುಂದೆ ಇವೆಲ್ಲ ಗೌಣವಾಗಬೇಕಾಗಿತ್ತು. ಆದರೆ ಇವೇ

ಪ್ರಮುಖವಾಗಿ ವಿಜೃಂಭಿಸುವುದು ಮಾತ್ರ ಅತಿ ದೊಡ್ಡ ವ್ಯಂಗ್ಯ! ಜಾತ್ರೆಯಲ್ಲಿ ಭಾಗವಹಿಸುವ ಭಕ್ತರನ್ನು ನೋಡಿ. ಅವರಿಗೆ ವಸತಿಯ ವ್ಯವಸ್ಥೆ ಇರುವುದಿಲ್ಲ, ಊಟದ ವ್ಯವಸ್ಥೆ ಇರುವುದಿಲ್ಲ. ಯಾರನ್ನೂ ಜಾತ್ರೆಗೆ ಮುಖ್ಯ ಅತಿಥಿಗಳಾಗಿ ಬರಲು, ಅಧ್ಯಕ್ಷತೆ ವಹಿಸಲು ಆಹ್ವಾನಿಸಿರುವುದಿಲ್ಲ. ತಾವೇ ಮನೆಯಿಂದ ಕಟ್ಟಿಕೊಂಡು ತಂದ ಬುತ್ತಿರೊಟ್ಟಿಯನ್ನು ಯಾವುದೋ ಮರದಡಿಯಲ್ಲಿ ಕುಳಿತು ಸಂತೋಷವಾಗಿ ಉಂಡು, ಯಾವುದೋ ಕೆರೆ ಕುಂಟೆಯ ನೀರನ್ನು ಕುಡಿದು ಆನಂದತುಂದಿಲರಾಗಿ ಮನೆಗೆ ಹಿಂತಿರುಗುತ್ತಾರೆ. ಜಾತ್ರೆಯಲ್ಲಿ ದೇವರ ದರ್ಶನದಿಂದ ತಮ್ಮ ಜೀವನ ಸಾರ್ಥಕವಾಯಿತು ಎಂದುಕೊಳ್ಳುತ್ತಾರೆ. ಜಾತ್ರೆಯ ಸವಿನೆನಪುಗಳನ್ನು ಊರಲ್ಲಿದ್ದವರೊಂದಿಗೆ ಹಂಚಿಕೊಳ್ಳುತ್ತಾರೆ. ಕಯ್ಯಾರ ಕಿಞ್ಞಣ್ಣರೈ ಅವರು ಹೇಳುವ ತೀರ್ಥಯಾತ್ರೆ ಈ ಜಾತ್ರೆಗಿಂತ ಭಿನ್ನವಾಗಿರಲಾರದು. ಜಾತ್ರೆಗಳು ನಡೆಯುವುದೇ ತೀರ್ಥಕ್ಷೇತ್ರಗಳಲ್ಲಿ, ಜಾತ್ರೆ ಮಾಡಿದವರು ವಾಸ್ತವವಾಗಿ ತೀರ್ಥಯಾತ್ರೆಯನ್ನೇ ಮಾಡಿರುತ್ತಾರೆ. ಹೀಗಿರುವಾಗ ಜಾತ್ರೆ ಮತ್ತು ತೀರ್ಥಯಾತ್ರೆಗಳ ಆಶಯ ಭಿನ್ನ ಮತ್ತು ವಿರುದ್ಧ ಎಂದು ಭಾವಿಸಲಾಗದು. 'ಜಾತ್ರೆಯಂತಾಗಬಾರದು' ಎಂದರೆ ಜಾತ್ರೆಗೆ ಹೋಗುವ ಭಕ್ತರ ನಿಷ್ಕಳಂಕ ಮನಸ್ಸನ್ನು ನಿರ್ವ್ಯಾಜ ಭಕ್ತಿಯನ್ನು ನಾವು ಅಪಮಾನಗೊಳಿಸಿದಂತಾಗುತ್ತದೆ.

ಸಾಹಿತ್ಯ ಸಮ್ಮೇಳನಕ್ಕೆ ಬರುವ ಬಹುತೇಕ ಜನರ ಮಾನಸಿಕ ಸ್ಥಿತಿ ಜಾತ್ರೆಗೆ ಬರುವ ಭಕ್ತರಿಗಿಂತ ತೀರಾ ಭಿನ್ನವಾಗಿರುತ್ತದೆ. ಪ್ರಾಯಶಃ ಮದುವೆ ಛತ್ರಕ್ಕೆ ಬರುವ ನಂಟರ ಮನಃಸ್ಥಿತಿ ಅವರದಾಗಿರುತ್ತದೆ ಎಂದರೆ ಸತ್ಯಕ್ಕೆ ಸಮೀಪವಾದ ಮಾತನ್ನು ಹೇಳಿದಂತಾಗುತ್ತದೆ. ಮದುವೆಗಳಲ್ಲಿ ವಾಸಕ್ಕೆ ಕೊಠಡಿ ಸರಿಯಿಲ್ಲ, ಸ್ನಾನಕ್ಕೆ ಬಿಸಿನೀರು ಇಲ್ಲ, ಅಡುಗೆಯನ್ನು ರುಚಿಯಾಗಿ ಮಾಡಿಲ್ಲ, ತಮ್ಮನ್ನು ಸರಿಯಾಗಿ ಉಪಚರಿಸಲಿಲ್ಲ ಎಂದೆಲ್ಲಾ ಬೀಗರು ಗೊಣಗುವುದು, ಜಗಳವಾಡುವುದು ಸರ್ವೇ ಸಾಮಾನ್ಯ! ಎಷ್ಟೋ ವೇಳೆ ಈ ಕಾರಣಗಳಿಂದಾಗಿ ಕೈ ಕೈ ಮಿಲಾಯಿಸುವ ಪ್ರಸಂಗ ನಡೆದು ಮದುವೆ ನಿಂತು ನಿಷ್ಪಾಪಿ ಕನ್ಯಾಪಿತೃ ಕಣ್ಣೀರಿಡುವ ದೈನೇಸಿ ಸ್ಥಿತಿಯೂ ಬಂದರೆ ಆಶ್ಚರ್ಯವಿಲ್ಲ. ಕನ್ನಡಕ್ಕಾಗಿ ಪ್ರಾಣಕೊಡಲೂ ಸಿದ್ಧವೆಂದು ಘೋಷಿಸಿಕೊಳ್ಳುವ ಜನರನೇಕರು ಮದುವೆಗೆ ಬಂದ ಬೀಗರಂತೆ ಒಪ್ಪೊತ್ತಿನ ಊಟಕ್ಕಾಗಿ ಜಗಳವಾಡುವುದನ್ನು ಕಂಡು ನಗಬೇಕಷ್ಟೆ. ಆದರೆ ಇಂಥವುಗಳನ್ನು ಜಾತ್ರೆಗಳಲ್ಲಿ ಕಾಣಲಾರೆವು.

ಜಾತ್ರೆಯಲ್ಲಿ ಕೈಯಲ್ಲಿ ಹಣ್ಣುಕಾಯಿ ಹಿಡಿದು ಗುಡಿಯೊಳಗೆ ಹೋಗಿ ದೇವರ ದರ್ಶನ ಪಡೆಯುವ ಭಕ್ತನ ಹೃದಯಕ್ಕೂ, ಕೈಯಲ್ಲಿ ಲೇಖನಿ ಹಿಡಿದು ಭಾವನೆಗಳನ್ನು ತುಂಬಿಕೊಂಡು ಬರೆಯುವ ಕವಿಹೃದಯಕ್ಕೂ ಹೆಚ್ಚು ಅಂತರವಿಲ್ಲವೆಂದೇ ನಮ್ಮ ಭಾವನೆ. ಭಕ್ತನು ದೇವರ ಮೇಲಿನ ಅನನ್ಯ ಭಕ್ತಿಯಲ್ಲಿ ಅನಿರ್ವಚನೀಯವಾದ ಆನಂದದಲ್ಲಿ ಮುಳುಗಿದ್ದರೆ ಕವಿಯು ತನ್ನ ಪ್ರತಿಭೆಯು ನಿರ್ಮಿಸುವ ಕಾವ್ಯರಸದ ಕಾಸಾರದಲ್ಲಿ ಈಸುತ್ತಾನೆ. ಆದುದರಿಂದಲೇ ಕಾವ್ಯರಸಾಸ್ವಾದವನ್ನು ಕುರಿತು "ಬ್ರಹ್ಮಾನಂದ ಸಹೋದರಃ" ಎನ್ನುತ್ತಾರೆ. ಜಾತ್ರೆಗೆ ಹೋಗುವ ಭಕ್ತನ ಮನಃಸ್ಥಿತಿಯಂತೆ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿಗಳು, ಕನ್ನಡಾಭಿಮಾನಿಗಳು ಭಾಗವಹಿಸುವಂತಾದರೆ ಆಗ ಅದು ನಿಜವಾಗಿಯೂ ಕನ್ನಡದ ತೀರ್ಥಯಾತ್ರೆ ಆದೀತು. ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡ ಭುವನೇಶ್ವರಿಯ ಜಾತ್ರೆಯಾಗಲಿ, ಕಾಡು ಹರಟೆಯ ಚೌಕಾಸಿ ವ್ಯಾಪಾರದ ಸಂತೆಯಾಗದಿರಲಿ, ರಾಜಕೀಯದ್ವೇಷಗಳಿಂದ ಬಾಯಿಚಪಲಕ್ಕೆ ಶಾಸಕರು ಮತ್ತು ಮಂತ್ರಿಗಳು ಪರಸ್ಪರ ಹಳಿಯುವ ವಿಧಾನಸಭೆಯ ಕಾರ್ಯಕಲಾಪಗಳಂತಾಗದಿರಲಿ!

ನಾಳೆಯಿಂದ ಚಿತ್ರದುರ್ಗದಲ್ಲಿ ನಡೆಯಲು ಏರ್ಪಾಡಾಗಿರುವ 75 ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಮೃತಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದೆ. 'ಸಾಹಿತ್ಯ ಸಮ್ಮೇಳನ' ಜಾತ್ರೆಯಾಗದಿರಲಿ ಎಂದು ಈ ಹಿಂದಿನ ಸಮ್ಮೇಳನಗಳಲ್ಲಿ ಕೇಳಿಬರುತ್ತಿತ್ತು. ಈಗ ಬೇರೊಂದು ಬಗೆಯ ಟೀಕೆ ಕೇಳಿಬರುತ್ತಿದೆ. ಆರಂಭದ ವರ್ಷಗಳಲ್ಲಿ ಈ ಸಮ್ಮೇಳನ ಸಾಹಿತಿಗಳಿಗಷ್ಟೇ ಸೀಮಿತವಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯದ ವಿಷಯಕ್ಕಷ್ಟೇ ಸೀಮಿತಗೊಳ್ಳದೆ ಕನ್ನಡನಾಡು ನುಡಿ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಜನಸಾಮಾನ್ಯರೂ ಭಾಗವಹಿಸುವಂತೆ ರೂಪುಗೊಂಡಿರುವ 'ಕನ್ನಡದ ಜಾತ್ರೆ'ಗೆ ಎಲ್ಲರೂ ಮೈಚಳಿ ಬಿಟ್ಟು ಹೊಂದಿಕೊಂಡಿದ್ದಾರೆ. ಮೆರವಣಿಗೆ, ಉರವಣಿಗೆಗಳನ್ನು ಖಂಡಿಸುತ್ತಿದ್ದ ವಿಚಾರವಂತ ಸಾಹಿತಿಗಳೂ ಸಹ ಈ ಹಿನ್ನೆಲೆಯಲ್ಲಿ ರಾಜಿಮಾಡಿಕೊಂಡಂತೆ ತೋರುತ್ತದೆ. ಆದರೆ ಸ್ವಾಮಿಗಳ ಸಾನ್ನಿಧ್ಯದ ಬಗ್ಗೆ ಮಾತ್ರ ಇನ್ನೂ ಕೆಲವರ ತಕರಾರು ಇರುವಂತೆ ಕಾಣಿಸುತ್ತದೆ. ಚಿತ್ರದುರ್ಗದ ಸಾಹಿತ್ಯ ಸಮ್ಮೇಳನ ಒಂದು ರೀತಿಯಲ್ಲಿ ಮಠಾಧಿಪತಿಗಳ ಸಮ್ಮೇಳನದಂತಿದೆ, ತರಾಸು ಹೆಸರಿನ ವೇದಿಕೆಯಲ್ಲಿ ಪ್ರಗತಿಪರ ಸಾಹಿತಿಗಳ ಸಮಾಧಿಯಾಗಲಿದೆ ಎಂಬ ಅಪಸ್ವರವೂ ಕೇಳಿಬಂದಿದೆ. ಇದು ನೋಡುವವರ ದೃಷ್ಟಿಯನ್ನು ಅವಲಂಬಿಸಿದೆ. "ಗುಡಿ, ಚರ್ಚು, ಮಸೀದಿಗಳ ಬಿಟ್ಟು ಹೊರಬನ್ನಿ ... ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ" ಎಂದು ಕರೆ ನೀಡಿದ ಕುವೆಂಪುರವರ ಆಶಯ ಈ ಸಮ್ಮೇಳನದಿಂದ ಸ್ವಾಮಿ, ಪಾದ್ರಿ, ಮೌಲ್ವಿಗಳನ್ನು ಹೊರಗಿಡಿ ಎಂಬರ್ಥದಲ್ಲಿ ಅಲ್ಲ. ಆ ಮತ ಈ ಮತ ಎಂಬ ವ್ಯತ್ಯಾಸಗಳಿಂದ ಬಡಿದಾಡಿ ಮನುಜಮತಕ್ಕೆ, ವಿಶ್ವಪಥಕ್ಕೆ ಅಡ್ಡ ಬರಬೇಡಿ ಎಂಬ ಕಾಳಜಿಯಿಂದ.

ಸಾಹಿತ್ಯಕ್ಕೂ ಮತ್ತು ಧರ್ಮಕ್ಕೂ ಪ್ರಾಚೀನಕಾಲದಿಂದಲೂ ಅವಿನಾಭಾವ ಸಂಬಂಧ ಇದೆ; ಶಬ್ದ ಮತ್ತು ಅರ್ಥದ ಸಂಬಂಧವಿದ್ದ ಹಾಗೆ. ಇಡೀ ಕನ್ನಡಸಾಹಿತ್ಯ ವಿಭಿನ್ನ ಧರ್ಮಗಳ ನೆಲೆಗಟ್ಟಿನ ಮೇಲೆ ರೂಪುಗೊಂಡಿದೆ. ಹೀಗಿರುವಾಗ ಧರ್ಮದಿಂದ ಸಾಹಿತ್ಯವನ್ನು ಬೇರ್ಪಡಿಸುವುದಾಗಲೀ, ಸಾಹಿತ್ಯದಿಂದ ಧರ್ಮವನ್ನು ಬೇರ್ಪಡಿಸುವುದಾಗಲೀ ಸಾಧ್ಯವಾಗದ ಮಾತು. ಸಾಹಿತ್ಯ ಸಮ್ಮೇಳನ ಒಂದರ್ಥದಲ್ಲಿ 'ಸರ್ವಧರ್ಮ ಸಮ್ಮೇಳನ'ವೂ ಹೌದು. ಪ್ರಾಚೀನಕಾಲದಲ್ಲಿ ವಿಭಿನ್ನ ಮತಧರ್ಮಗಳು ಸಾಹಿತ್ಯಕ್ಕೆ ಇಂಬು ಕೊಟ್ಟಿದ್ದರೆ ಆಧುನಿಕ ಕಾಲದಲ್ಲಿ ಸಾಹಿತ್ಯವೇ ವಿಭಿನ್ನ ಪಂಥಗಳಿಗೆ, ವಿಭಿನ್ನ ಸಾಹಿತ್ಯ ಪ್ರಾಕಾರಗಳಿಗೆ ಇಂಬುಕೊಟ್ಟಿದೆ. ಯಾವ ಮತಧರ್ಮ ಪಂಥದವರನ್ನು ಹೊರಗಿಡುತ್ತೀರಿ? 'ಮತ' ಎಂಬ ಶಬ್ದದ ಮೂಲಾರ್ಥ 'ಅಭಿಪ್ರಾಯ'. ಇಂದು ವ್ಯವಹಾರದಲ್ಲಿ ಅದಕ್ಕೆ ಎರಡು ಅರ್ಥಗಳಿವೆ. ಒಂದು ಚುನಾವಣೆಯ ಸಂದರ್ಭದಲ್ಲಿ ಚಲಾಯಿಸುವ 'ಮತ' ಅಂದರೆ ಓಟು. ಮತ್ತೊಂದು ವ್ಯಕ್ತಿ ತಾನು ನಂಬಿರುವ 'ಮತ' ಅಂದರೆ ಧರ್ಮ. ಇಂದಿನ ಜಾತೀಯ ರಾಜಕಾರಣದಲ್ಲಿ 'ಮತ' (Vote) ಮತಧರ್ಮದೊಂದಿಗೆ (Religion) ತಳುಕು ಹಾಕಿಕೊಂಡು 'ಸಾರ್ಥಕತೆ'ಯನ್ನು ಪಡೆದಿದೆ! ಯಾವ ಮಠಾಧೀಶರೂ ತಮ್ಮ ಮತಧರ್ಮದ ಪ್ರಚಾರಕ್ಕೆ ಸಾಹಿತ್ಯ ಸಮ್ಮೇಳನದ ವೇದಿಕೆಯನ್ನು ಬಳಸಿಕೊಂಡಿಲ್ಲ. ಮಠಾಧೀಶರಲ್ಲಿಯೂ ಸಾಹಿತಿಗಳಿದ್ದಾರೆ; ಸಾಹಿತ್ಯ ಮತ್ತು ಸಾಹಿತಿಗಳನ್ನು ಪೋಷಣೆ ಮಾಡಿಕೊಂಡು ಬಂದವರಿದ್ದಾರೆ. ಹೀಗಿರುವಾಗ ವೇದಘೋಷದ ಅಬ್ಬರವಿಲ್ಲದೆ, ಬಿರುದು ಬಾವಲಿಗಳ 'ಬಿನ್ನಾಣ'ವಿಲ್ಲದೆ ಸಾಹಿತ್ಯದ ಒಲವುಳ್ಳ ಮಠಾಧೀಶರು ಭಾಗವಹಿಸಿದ ಚಿತ್ರದುರ್ಗ ಸಮ್ಮೇಳನಕ್ಕೆ ವೈಚಾರಿಕತೆಯ ನೆಪದಲ್ಲಿ ಮಡಿಮೈಲಿಗೆಯ ಸೂತಕವೇತಕೆ? ರೆವರೆಂಡ್ ಕಿಟೆಲ್, ರೆವರೆಂಡ್ ಉತ್ತಂಗಿ ಚೆನ್ನಪ್ಪ ಇವರೇನಾದರೂ ಈಗ ಬದುಕಿದ್ದರೆ ಅವರನ್ನು ಮತಧರ್ಮದ ಕಾರಣಕ್ಕಾಗಿ ಸಾಹಿತ್ಯಸಮ್ಮೇಳನದಿಂದ ಹೊರಗಿಡಲು ಬರುತ್ತಿತ್ತೇ?

**ಬಾ ಬಾ ಬಾರ ಬಿಗುಮಾನ ಬಿಟ್ಟು ಹತ್ತಿರಕೆ**
**ಒಂದಾಗಿ ಕನ್ನಡದ ಕಾವ್ಯರಸಾಸ್ವಾದಕೆ!**

**28.1.2009**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑